ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು(ಪಂ.ರಾಜ್), ಗ್ರಾಅಪ ಇಲಾಖೆ ಇವರ ಅಧ್ಯಕ್ಷತೆಯಲ್ಲಿ ದಿನಾಂಕ:08.01.2018 ರಂದು ಅಪರಾಹ್ನ 03:00 ಗಂಟೆಗೆ ಗ್ರಾಅಪ ಇಲಾಖೆಯ ಸಭಾ ಕೊಠಡಿಯಲ್ಲಿ ಗ್ರಾಮ ಪಂಚಾಯತಿಗಳಲ್ಲಿ **IT Infrastucutre** ಗೆ ಅವಶ್ಯಕತೆ ಇರುವ ಪರಿಕರಗಳ ಮಾಹಿತಿ ಪಡೆಯಲು ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳ ಸಮಿತಿ (CEO Committee) ಸಭೆ ಆಯೋಜಿಸುವ ಕುರಿತು ಜರುಗಿದ ಸಭೆಯ ನಡವಳಿಗಳು.

**ಸಭೆಗೆ ಹಾಜರಾದ ಅಧಿಕಾರಿಗಳು: (ಶ್ರೀ/ಶ್ರೀಮತಿ)**

1. ಡಾ॥ ಎನ್. ನಾಗಾಂಬಿಕಾ ದೇವಿ, ಭಾಆಸೇ, ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು(ಪಂ.ರಾಜ್), ಗ್ರಾಅಪ ಇಲಾಖೆ, ಬಹುಮಹಡಿಗಳ ಕಟ್ಟಡ, ಬೆಂಗಳೂರು.
2. ಕೆ. ಯಾಲಕ್ಕಿಗೌಡ, ನಿರ್ದೇಶಕರು(ಇ-ಆಡಳಿತ), ಗ್ರಾಅಪ ಇಲಾಖೆ, ಬೆಂಗಳೂರು.
3. ಹಿರಿಯ ತಾಂತ್ರಿಕ ನಿರ್ದೇಶಕರು, ಎನ್.ಐ.ಸಿ, ಬೆಂಗಳೂರು.
4. ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ, ಬೆಂಗಳೂರು(ಗ್ರಾ) ಜಿಲ್ಲಾ ಪಂಚಾಯತಿ.
5. ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ, ಕೋಲಾರ ಜಿಲ್ಲಾ ಪಂಚಾಯತಿ.
6. ಕಾರ್ಯನಿರ್ವಾಹಕ ಅಧಿಕಾರಿ, ಹುಣಸೂರು ತಾಲ್ಲೂಕು ಪಂಚಾಯತಿ, ಮೈಸೂರು ಜಿಲ್ಲಾ ಪಂಚಾಯತಿ.
7. ಗಗನ್ ಎ.ಎಸ್. ಸಹಾಯಕ ನಿರ್ದೇಶಕರು, ಇ-ಆಡಳಿತ, ಗ್ರಾಅಪ ಇಲಾಖೆ.
8. ಲಕ್ಷ್ಮೀ ಆರ್. ಪಂ.ಅ.ಅ., ಇ-ಆಡಳಿತ, ಗ್ರಾಅಪ ಇಲಾಖೆ.
9. ರಾಜೇಶ್, ಪಂ.ಅ.ಅ., ರಾಜಾನುಕುಂಟೆ ಗ್ರಾ.ಪಂ. ಬೆಂಗಳೂರು ಉತ್ತರ ತಾಲ್ಲೂಕು.
10. ಸಿದ್ಧರಾಜು, ಹೆಚ್.ಬಿ., ಪಂ.ಅ.ಅ., ಸೋಮನಹಳ್ಳಿ ಗ್ರಾ.ಪಂ., ಬೆಂಗಳೂರು ಪೂರ್ವ ತಾಲ್ಲೂಕು.
11. ಮಹಮ್ಮದ್ ಇಮ್ತಿಯಾಜ್, ರಾಜ್ಯ ಯೋಜನಾ ವ್ಯವಸ್ಥಾಪಕರು(ಇ-ಪಂಚಾಯತ್), ಗ್ರಾಅಪ ಇಲಾಖೆ.
12. ಅಮೃತವರ್ಷಿಣಿ, ತಾಂತ್ರಿಕ ಸಮಾಲೋಚಕರು, ಇ-ಆಡಳಿತ, ಗ್ರಾಅಪ ಇಲಾಖೆ.
13. ಪೃಥ್ವಿ ಮುನಿರಾಜು, ಪ್ರೋಗ್ರಾಮರ್, ಇ-ಆಡಳಿತ, ಗ್ರಾಅಪ ಇಲಾಖೆ.

ನಿರ್ದೇಶಕರು (ಇ-ಆಡಳಿತ), ಗ್ರಾಅಪ ಇಲಾಖೆ ಇವರು ಸಭೆಯಲ್ಲಿ ಹಾಜರಿದ್ದ ಎಲ್ಲಾ ಅಧಿಕಾರಿಗಳನ್ನು ಸ್ವಾಗತಿಸಿದರು ಹಾಗೂ ಸಭೆಯ ಕಾರ್ಯಸೂಚಿಗಳ ಬಗ್ಗೆ ವಿವರಿಸಿದರು.

ಗ್ರಾಮ ಪಂಚಾಯತಿಗಳಲ್ಲಿ IT Infrastructure ಗೆ ಅವಶ್ಯಕತೆ ಇರುವ ಪರಿಕರಗಳ ಮಾಹಿತಿ ಪಡೆಯುವ ಸಲುವಾಗಿ ರಚಿಸಲಾದ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳ ಸಮಿತಿಯ (CEO Committee) ಅಧ್ಯಕ್ಷರಾದ ಮಾನ್ಯ ಪ್ರಧಾನ ಕಾರ್ಯದರ್ಶಿಗಳು(ಪಂ.ರಾಜ್) ರವರನ್ನು ಸಭೆಯ ಅಧ್ಯಕ್ಷತೆ ವಹಿಸಿಕೊಂಡು ಕಾರ್ಯಕಲಾಪಗಳನ್ನು ಮುನ್ನಡೆಸಿಕೊಡುವಂತೆ ನಿರ್ದೇಶಕರು(ಇ-ಆಡಳಿತ) ರವರು ಕೋರಿದರು.

ಪ್ರಧಾನ ಕಾರ್ಯದರ್ಶಿಗಳು(ಪಂ.ರಾಜ್) ರವರು ಸಭೆಯನ್ನು ಉದ್ದೇಶಿಸಿ ಮಾತನಾಡುತ್ತಾ, 2017-18ನೇ ಸಾಲಿನ ಆಯವ್ಯಯದಲ್ಲಿ ಗ್ರಾಮೀಣಾಭಿವೃದ್ಧಿ ಮತ್ತು ಪಂ.ರಾಜ್ ಇಲಾಖಾ ಗಣಕೀಕರಣ ಯೋಜನೆಯಡಿ ಹಂಚಿಕೆಯಾದ ₹ 18.25 ಕೋಟಿ ಅನುದಾನದ ಪೈಕಿ ಉಳಿಕೆಯಾದ ₹ 7.00 ಕೋಟಿ ಅನುದಾನದಲ್ಲಿ :

1. ಅಬ್ದುಲ್ ನಜೀರ್ ಸಾಬ್ ರಾಜ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂ.ರಾಜ್ ಸಂಸ್ಥೆಗೆ ಕಂಪ್ಯೂಟರ್‌ಗಳನ್ನು ಖರೀದಿಸಲು ₹ 100.00 ಲಕ್ಷ ಅನುದಾನವನ್ನು ನಿಗದಿಪಡಿಸಿದೆ,
2. ಇಲಾಖಾ ಸಭಾ ಕೊಠಡಿಯ ನವೀಕರಣ ಹಾಗೂ ವೀಡಿಯೋ ವಾಲ್ ಅಳವಡಿಸಲು, ಎನ್.ಐ.ಸಿ ಅಧಿಕಾರಿಗಳಿಗೆ ನೀಡುವ ಕೊಠಡಿ ನವೀಕರಣಗೊಳಿಸಲು ₹ 60.00 ಲಕ್ಷ ಅನುದಾನವನ್ನು ನಿಗದಿಪಡಿಸಿದೆ,
3. ಹಾಗೂ ಗ್ರಾಮ ಪಂಚಾಯತಿಗಳ IT Infrastructure ಗೆ ಅವಶ್ಯವಿರುವ ಪರಿಕರಗಳನ್ನು ಒದಗಿಸಲು ಉಳಿಕೆ ₹ 540.00 ಲಕ್ಷಗಳ ಅನುದಾನವನ್ನು ನಿಗದಿಪಡಿಸಿದ್ದು, ಅವಶ್ಯವಿರುವ Electronic ಉಪಕರಣಗಳು/ಪರಿಕರಗಳ ಬಗ್ಗೆ ಸದರಿ ಸಭೆಯಲ್ಲಿ ಚರ್ಚಿಸಲು ಉದ್ದೇಶಿಸಲಾಗಿದೆ ಎಂದು ಸಭೆಗೆ ತಿಳಿಸಿದರು.

ಸಭೆಗೆ ಹಾಜರಾಗಿದ್ದ ಬೆಂಗಳೂರು(ಗ್ರಾ) ಜಿಲ್ಲಾ ಪಂಚಾಯತಿಯ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು ಮಾತನಾಡಿ, e-Office(Less Paper Office) ಅನುಷ್ಠಾನಗೊಳಿಸಲು ಉದ್ದೇಶಿಸಿರುವ ಹಿನ್ನೆಲೆಯಲ್ಲಿ ಕಂಪ್ಯೂಟರ್‌ಗಳು ಹಾಗೂ ಸ್ಕ್ಯಾನರ್‌ಗಳ ಅವಶ್ಯಕತೆ ಇರುವುದಾಗಿ ತಿಳಿಸಿದರು. ಹಾಗೂ ತಮ್ಮ ಜಿಲ್ಲಾ ಪಂಚಾಯತಿ ವ್ಯಾಪ್ತಿಯಲ್ಲಿ e-Office(Less Paper Office) ಅನುಷ್ಠಾನಗೊಳಿಸಲು ಅನುಮತಿ ನೀಡುವಂತೆ ಕೋರಿದರು. ಪ್ರಧಾನ ಕಾರ್ಯದರ್ಶಿಗಳು(ಪಂ.ರಾಜ್) ಮಾತನಾಡಿ, e-Office(Less Paper Office) ಕ್ರಿಯಾ ಯೋಜನೆಯ ಅನುಮೋದನೆಗಾಗಿ ಮಾನ್ಯ ಗ್ರಾಅಪ ಸಚಿವರಿಗೆ ಕಡತವನ್ನು ಸಲ್ಲಿಸಲಾಗಿದ್ದು, ಅನುಮೋದನೆ ದೊರೆತ ನಂತರ e-Office(Less Paper Office) ಅನುಷ್ಠಾನಗೊಳಿಸಲು ಅನುಮತಿಸಲಾಗುವುದು ಹಾಗೂ ಇದಕ್ಕಾಗಿ ಕಂಪ್ಯೂಟರ್ ಪರಿಕರಗಳನ್ನು ಒದಗಿಸಲು ಕ್ರಮಕೈಗೊಳ್ಳಲಾಗುವುದು ಎಂದು ತಿಳಿಸಿದರು.

ಮುಂದುವರೆದು, ಪ್ರಧಾನ ಕಾರ್ಯದರ್ಶಿ(ಪಂ.ರಾಜ್) ರವರು ಮಾತನಾಡುತ್ತಾ ಗ್ರಾಮ ಪಂಚಾಯತಿಗಳನ್ನು ತಾಂತ್ರಿಕವಾಗಿ ಸಧೃಡಗೊಳಿಸುವ ಮೂಲಕ ಮಾದರಿ ಗ್ರಾಮ ಪಂಚಾಯತಿಗಳನ್ನಾಗಿ ರೂಪಿಸಲು ಅತ್ಯವಶ್ಯಕವಾಗಿ ಒದಗಿಸಬಹುದಾದ Electronic ಉಪಕರಣಗಳು/ಪರಿಕರಗಳ ಬಗ್ಗೆ ಚರ್ಚಿಸುವಂತೆ ಸಭೆಗೆ ತಿಳಿಸಿದರು. ಈ ನಿಟ್ಟಿನಲ್ಲಿ ವಾರ್ಡ್ ಸಭೆ, ಗ್ರಾಮ ಸಭೆ/ವಿಶೇಷ ಗ್ರಾಮ ಸಭೆಗಳು ಹಾಗೂ ಗ್ರಾಮ ಪಂಚಾಯತಿ ಸಭೆಗಳ ಕಾರ್ಯಕಲಾಪಗಳನ್ನು ಸಾರ್ವಜನಿಕ ವೀಕ್ಷಣೆಗೆ ಪ್ರಸ್ತುತಪಡಿಸಲು ಹಾಗೂ ಸರ್ಕಾರದ ವಿವಿಧ ಇಲಾಖೆಗಳ ಯೋಜನೆ/ಕಾರ್ಯಕ್ರಮಗಳ ರೂಪುರೇಷೆ ಹಾಗೂ ಕಾರ್ಯವಿಧಾನಗಳನ್ನು ಗ್ರಾಮೀಣ ಜನತೆಗೆ ಗೊತ್ತುಪಡಿಸಲು ಅನುವಾಗುವಂತೆ, ಎಲ್ಲಾ ಗ್ರಾಮ ಪಂಚಾಯತಿಗಳಿಗೆ Projectors ಗಳನ್ನು ಒದಗಿಸುವ ಅವಶ್ಯಕತೆ ಇರುವುದನ್ನು ಮಾನ್ಯ ಪ್ರಧಾನ ಕಾರ್ಯದರ್ಶಿ(ಪಂ.ರಾಜ್) ರವರು ಸಭೆಯ ಗಮನಕ್ಕೆ ತಂದರು.

ಸಭೆಯಲ್ಲಿ ಹಾಜರಿದ್ದ ಪಂಚಾಯತಿ ಅಭಿವೃದ್ಧಿ ಅಧಿಕಾರಿಗಳು ಮಾತನಾಡಿ, ಗ್ರಾಮ ಪಂಚಾಯತಿಗಳಲ್ಲಿ Digital Transactions ಗಳನ್ನು ಉತ್ತೇಜಿಸುವ ಮೂಲಕ Digital ಗ್ರಾಮ ಪಂಚಾಯತಿಗಳನ್ನಾಗಿ ಪರಿವರ್ತಿಸಲು Point of Sale (PoS) ಗಳನ್ನು ನೀಡಬಹುದೆಂದು ಸಭೆಗೆ ತಿಳಿಸಿದರು. ಈ ಬಗ್ಗೆ ರಾಜ್ಯ ಯೋಜನಾ ವ್ಯವಸ್ಥಾಪಕರು ಮಾತನಾಡಿ State Bank of India ರವರೊಂದಿಗೆ PoS ಗಳ ಬಗ್ಗೆ ಚರ್ಚಿಸಲಾಗಿದ್ದು, Rental ಆಧಾರದಲ್ಲಿ PoS Machine ಗಳನ್ನು ಒದಗಿಸುವುದಾಗಿ ತಿಳಿಸಿರುತ್ತಾರೆ ಎಂದು ಸಭೆಗೆ ತಿಳಿಸಿದರು. ವಹಿವಾಟಿನ ಆಧಾರದ ಮೇಲೆ ಸದರಿ Machine ಗಳಿಗೆ ಶುಲ್ಕ ನಿಗದಿಪಡಿಸಲಾಗುವುದೆಂದು SBI ರವರು ತಿಳಿಸಿರುವುದಾಗಿ ರಾಜ್ಯ ಯೋಜನಾ ವ್ಯವಸ್ಥಾಪಕರು ಸಭೆಯ ಗಮನಕ್ಕೆ ತಂದರು. ಸದರಿ PoS ಗಳ ಬಗ್ಗೆ ರಾಷ್ಟ್ರೀಕೃತ ಬ್ಯಾಂಕ್‌ನ ಅಧಿಕಾರಿಗಳೊಂದಿಗೆ ಚರ್ಚಿಸಿ ವಿವರಗಳನ್ನು ಪಡೆಯುವಂತೆ ಪ್ರಧಾನ ಕಾರ್ಯದರ್ಶಿಗಳು(ಪಂ.ರಾಜ್) ರವರು ರಾಜ್ಯ ಯೋಜನಾ ವ್ಯವಸ್ಥಾಪಕರಿಗೆ ತಿಳಿಸಿದರು.

ಸಭೆಗೆ ಹಾಜರಾಗಿದ್ದ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ, ಬೆಂಗಳೂರು(ಗ್ರಾ) ಜಿ.ಪಂ. ರವರು ಮಾತನಾಡಿ ಗ್ರಾಮ ಪಂಚಾಯತಿ ಆಸ್ತಿಗಳ ನಮೂನೆ-9 ಹಾಗೂ ನಮೂನೆ-11 ರ ದಾಖಲೆಗಳು ಕೆಲವು ಕಡೆ ದುರುಪಯೋಗವಾಗುತ್ತಿದ್ದು, ಸದರಿ ದಾಖಲೆಗಳನ್ನು ಸ್ಕ್ಯಾನ್ ಮಾಡಲು ಪ್ರತಿ ಗ್ರಾಮ ಪಂಚಾಯತಿಗೆ ಒಂದರಂತೆ ಸ್ಕ್ಯಾನರ್ಸ್ ಗಳನ್ನು ಒದಗಿಸುವಂತೆ ತಿಳಿಸಿದರು. ಈ ಸಂಬಂಧ ಮಾನ್ಯ ಪ್ರಧಾನ ಕಾರ್ಯದರ್ಶಿಗಳು(ಪಂ.ರಾಜ್) ರವರು ಆಡಳಿತ ಸುಧಾರಣೆಯ ನಿಟ್ಟಿನಲ್ಲಿ Digital Library ಕಾರ್ಯಕ್ರಮದ ಭಾಗವಾಗಿ ಸ್ಕ್ಯಾನರ್ಸ್ ಗಳನ್ನು ಅಳವಡಿಸಿಕೊಳ್ಳುವಂತೆ ತಿಳಿಸಿದರು.

ಕಾರ್ಯನಿರ್ವಾಹಕ ಅಧಿಕಾರಿಗಳು, ಹುಣಸೂರು ತಾಲ್ಲೂಕು ಪಂಚಾಯತಿ ರವರು ಮಾತನಾಡಿ, ಅಬ್ದುಲ್ ನಜೀರ್ ಸಾಬ್ ರಾಜ್ಯ ಗ್ರಾಮೀಣಾಭಿವೃದ್ಧಿ & ಪಂ.ರಾಜ್ ಸಂಸ್ಥೆಯ ವತಿಯಿಂದ ಆಯೋಜಿಸಲ್ಪಡುವ ರಾಜ್ಯ/ಜಿಲ್ಲಾ/ತಾಲ್ಲೂಕು ಮಟ್ಟದ ಉಪಗ್ರಹ ಆಧಾರಿತ ತರಬೇತಿ/ ಕಾರ್ಯಾಗಾರಗಳು ಗ್ರಾಮೀಣ ಜನತೆಯನ್ನು

ತಲುಪುವಂತಾಗಲು ಗ್ರಾಮ ಪಂಚಾಯತಿ ಮಟ್ಟದಲ್ಲಿ ಉಪಗ್ರಹ ಸ್ವೀಕೃತಿ ಕೇಂದ್ರಗಳನ್ನು ತೆರೆಯುವ ಅವಶ್ಯಕತೆ ಇರುತ್ತದೆ ಎಂದು ಸಭೆಗೆ ತಿಳಿಸಿದರು. ಪ್ರಧಾನ ಕಾರ್ಯದರ್ಶಿ(ಪಂ.ರಾಜ್) ರವರು ಗ್ರಾಮ ಪಂಚಾಯತಿ ಮಟ್ಟದಲ್ಲಿ ಉಪಗ್ರಹ ಸ್ವೀಕೃತಿ ಕೇಂದ್ರಗಳನ್ನು ತೆರೆಯಲು ಪೂರಕವಾಗಿರುವ ಪರಿಕರಗಳು ಹಾಗೂ ಇದಕ್ಕೆ ತಗಲುವ ವೆಚ್ಚದ ಬಗ್ಗೆ ಮಾಹಿತಿಯನ್ನು ಸಂಗ್ರಹಿಸುವಂತೆ ತಿಳಿಸಿದರು.

ನಿರ್ದೇಶಕರು(ಇ-ಆಡಳಿತ) ರವರು ಮಾತನಾಡಿ, ಈ ಬಗ್ಗೆ ನಿರ್ದೇಶಕರು, ಅಬ್ದುಲ್ ನಜೀರ್ ಸಾಬ್ ರಾಜ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂ.ರಾಜ್ ಸಂಸ್ಥೆ (ANSSIRD&PR) ರವರು ಪ್ರತಿ ಗ್ರಾಮ ಪಂಚಾಯತಿಗೆ ಅಂದಾಜು ರೂ. 25000 ಆಗಬಹುದು ಎಂದು ತಿಳಿಸಿರುತ್ತಾರೆ ಎಂಬುದನ್ನು ಸಭೆಯ ಗಮನಕ್ಕೆ ತಂದರು. ಗ್ರಾಮ ಪಂಚಾಯತಿಗಳು ತಮ್ಮ ಸ್ವಂತ ಸಂಪನ್ಮೂಲ ನಿಧಿ ಖಾತೆ(Own Source Revenue Fund Account), 14ನೇ ಹಣಕಾಸು ಯೋಜನೆಯ ಆಡಳಿತಾತ್ಮಕ ವೆಚ್ಚದಲ್ಲಿ ಈ ವೆಚ್ಚವನ್ನು ಭರಿಸಬಹುದು ಹಾಗೂ ಗ್ರಾಮ ಪಂಚಾಯತಿವರೆಗೆ ಉಪಗ್ರಹ ಸ್ವೀಕೃತಿ ಕೇಂದ್ರವನ್ನು ತೆಗೆದುಕೊಂಡು ಹೋದಂತೆ ಆಗುತ್ತದೆಂದು ತಿಳಿಸಿದರು. ಪ್ರಧಾನ ಕಾರ್ಯದರ್ಶಿ(ಪಂ.ರಾಜ್) ಮಾತನಾಡಿ, ಈ ಬಗ್ಗೆ ಪರಿಶೀಲಿಸಿ ಅಗತ್ಯ ಕ್ರಮವಹಿಸಲು ನಿರ್ದೇಶಕರು(ಪಂ.ರಾಜ್-2) ರವರಿಗೆ ತಿಳಿಸಿದರು.

ಸಭೆಯಲ್ಲಿದ್ದ ಪಂಚಾಯತಿ ಅಭಿವೃದ್ಧಿ ಅಧಿಕಾರಿಗಳು ಗ್ರಾಮ ಪಂಚಾಯತಿಗಳಿಗೆ ನಿರಂತರ ವಿದ್ಯುತ್ ಸಂಪರ್ಕ ಕಲ್ಪಿಸುವ ಅವಶ್ಯಕತೆ ಇರುವುದರಿಂದ ಗ್ರಾಮ ಪಂಚಾಯತಿಗಳಿಗೆ Solar Roof Top ಗಳನ್ನು ಅಳವಡಿಸುವ ಅವಶ್ಯಕತೆ ಇರುತ್ತದೆ ಎಂದು ತಿಳಿಸಿದರು. ಪ್ರಧಾನ ಕಾರ್ಯದರ್ಶಿ(ಪಂ.ರಾಜ್) ರವರು ಮಾತನಾಡುತ್ತಾ, ಗ್ರಾಮ ಪಂಚಾಯತಿ ಕಛೇರಿಗೆ ವಿದ್ಯುತ್ ಪೂರೈಕೆಗೊಳಿಸುವುದರ ಜೊತೆಗೆ ಗ್ರಾಮ ಪಂಚಾಯತಿ ವ್ಯಾಪ್ತಿಯ ಬೀದಿ ದೀಪಗಳಿಗೆ ನಿರಂತರ ವಿದ್ಯುತ್ ಪೂರೈಸಲು ಅಗತ್ಯ ಕ್ರಮವಹಿಸುವುದು ಅತ್ಯಂತ ಪ್ರಮುಖವಾಗಿರುತ್ತದೆ ಎಂದು ತಿಳಿಸಿದರು.

ಸಭೆಗೆ ಹಾಜರಾಗಿದ್ದ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ, ಕೋಲಾರ ಜಿ.ಪಂ. ರವರು ಮಾತನಾಡಿ, ಗ್ರಾಮ ಪಂಚಾಯತಿಗಳಿಗೆ Wi-Fi ಸಂಪರ್ಕವನ್ನು ಕಲ್ಪಿಸಬೇಕಾಗಿರುತ್ತದೆ ಎಂದು ತಿಳಿಸಿದರು. ಸದರಿ ವಿಷಯದ ಬಗ್ಗೆ ನಿರ್ದೇಶಕರು(ಇ-ಆಡಳಿತ) ರವರು ಮಾತನಾಡಿ ರಾಜ್ಯದಲ್ಲಿನ 2500 ಗ್ರಾಮ ಪಂಚಾಯತಿಗಳಿಗೆ ಉಚಿತ Wi-Fi ಸಂಪರ್ಕವನ್ನು ಕಲ್ಪಿಸುವ ಬಗ್ಗೆ ಸಿಆಸು(ಇ-ಆಡಳಿತ) ಇಲಾಖೆಯಿಂದ ಕ್ರಮವಹಿಸಲಾಗುತ್ತಿದೆ ಎಂದು ಸಭೆಗೆ ತಿಳಿಸಿದರು.

ಪ್ರಧಾನ ಕಾರ್ಯದರ್ಶಿ(ಪಂ.ರಾಜ್) ರವರು ಮಾತನಾಡುತ್ತಾ, ಗ್ರಾಮ ಪಂಚಾಯತಿಗಳನ್ನು Digital & Smart ಗ್ರಾಮ ಪಂಚಾಯತಿಗಳನ್ನಾಗಿಸುವ ನಿಟ್ಟಿನಲ್ಲಿ ಅವಶ್ಯಕ ಕ್ರಮವಹಿಸಬೇಕಾಗಿರುತ್ತದೆ. ಆದುದರಿಂದ ಗ್ರಾಮ ಪಂಚಾಯತಿಗಳಲ್ಲಿ ಸ್ವಂತ ಸಂಪನ್ಮೂಲವಿದ್ದಲ್ಲಿ ಈ ಕೆಳಕಂಡ ಕಾರ್ಯಕ್ರಮಗಳನ್ನು ಅನುಷ್ಠಾನಗೊಳಿಸಲು ಅಗತ್ಯವಿರುವ ಪರಿಕರಗಳನ್ನು ಖರೀದಿಸಲು ಗ್ರಾಮ ಪಂಚಾಯತಿ ಸಾಮಾನ್ಯ ಸಭೆಯ ಅನುಮೋದನೆ ಪಡೆದುಕೊಂಡು, ಕರ್ನಾಟಕ ಪಾರದರ್ಶಕ ನಿಯಮಗಳು 1999/2000 ಗಳನ್ನು ಪಾಲಿಸತಕ್ಕದ್ದು ಹಾಗೂ ಕಾರ್ಯಕ್ರಮಗಳನ್ನು ಅನುಷ್ಠಾನಗೊಳಿಸಲು ಅಗತ್ಯ ಕ್ರಮವಹಿಸಬಹುದೆಂದು ಸಭೆಯಲ್ಲಿ ತಿಳಿಸಿದರು, ಸಭೆಯು ಅದರಂತೆ ಅನುಮೋದಿಸಿತು.

1) e-office
2) Digital Library
3) Digilocker facility for all villagers
4) BSK 100 services through online
5) Projectors
6) e- Payments at GP
7) e- Receipts at GP

ಅಲ್ಲದೇ Solar Rooftop, Solar controllers for street lighting, ATM facility at GP level, ಇವುಗಳಂತಹ ನವೀನ ಮಾದರಿಯ ಉಪಕ್ರಮಗಳನ್ನು ಅಳವಡಿಸಿಕೊಳ್ಳುವುದರ ಮೂಲಕ ಮಾದರಿ ಗ್ರಾಮ ಪಂಚಾಯತಿಗಳನ್ನಾಗಿ ರೂಪಿಸುವ ಅವಶ್ಯಕತೆ ಇರುತ್ತದೆ. ಈ ಬಗ್ಗೆ ಪರಿಶೀಲಿಸಿ ಅಗತ್ಯ ಕ್ರಮವಹಿಸುವಂತೆ ಪ್ರಧಾನ ಕಾರ್ಯದರ್ಶಿ(ಪಂ.ರಾಜ್) ರವರು ಸಭೆಯಲ್ಲಿ ತಿಳಿಸಿದರು.

ಮೇಲ್ಕಂಡ ಅಂಶಗಳ ಬಗ್ಗೆ ಸಭೆಯಲ್ಲಿ ಸುದೀರ್ಘವಾಗಿ ಚರ್ಚಿಸಿ, ಸಮಗ್ರ ಚರ್ಚೆಯ ನಂತರ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳ ಸಮಿತಿ ಸಭೆಯ ಅಧ್ಯಕ್ಷತೆ ವಹಿಸಿದ್ದ ಪ್ರಧಾನ ಕಾರ್ಯದರ್ಶಿ(ಪಂ.ರಾಜ್) ರವರು ತಿಳಿಸಿದಂತೆ ಗ್ರಾಮ ಪಂಚಾಯತಿಗಳ IT Infrastructure ಗೆ ಅವಶ್ಯವಿರುವ ಪರಿಕರಗಳನ್ನು ಒದಗಿಸಲು ನಿಗದಿಪಡಿಸಿರುವ ರೂ.5.40 ಕೋಟಿಗಳಲ್ಲಿ ಗ್ರಾಮ ಪಂಚಾಯತಿಗಳು Projectors ಗಳನ್ನು ಹೊಂದುವುದು ಸೂಕ್ತ ಎಂದು ಸಭೆಯಲ್ಲಿ ಸರ್ವಾನುಮತದಿಂದ ತೀರ್ಮಾನಿಸಲಾಯಿತು.

ಕೊನೆಯಲ್ಲಿ ಸಭೆಯನ್ನು ವಂದನೆಗಳೊಂದಿಗೆ ಮುಕ್ತಾಯಗೊಳಿಸಲಾಯಿತು.

**ಸಂ:**ಗ್ರಾಅಪ/35/ಗ.ಕೋಶ/2017
**ದಿನಾಂಕ:**30.01.2018

(ಡಾ॥ ಎನ್. ನಾಗಾಂಬಿಕಾ ದೇವಿ)
ಸರ್ಕಾರದ ಪ್ರಧಾನ ಕಾರ್ಯದರ್ಶಿ(ಪಂ.ರಾಜ್)
ಗ್ರಾಮೀಣಾಭಿವೃದ್ಧಿ ಮತ್ತು ಪಂ.ರಾಜ್ ಇಲಾಖೆ.

ಇವರಿಗೆ:

1. ಮಾನ್ಯ ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು(ಪಂ.ರಾಜ್), ಗ್ರಾಅಪ ಇಲಾಖೆ, ಬೆಂಗಳೂರು.
2. ನಿರ್ದೇಶಕರು(ಇ-ಆಡಳಿತ), ಗ್ರಾಅಪ ಇಲಾಖೆ, ಬೆಂಗಳೂರು.
3. ಹಿರಿಯ ತಾಂತ್ರಿಕ ನಿರ್ದೇಶಕರು, ಎನ್.ಐ.ಸಿ, ಬೆಂಗಳೂರು.
4. ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ, ಬೆಳಗಾವಿ ಜಿಲ್ಲಾ ಪಂಚಾಯತಿ.
5. ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ, ದಾವಣಗೆರೆ ಜಿಲ್ಲಾ ಪಂಚಾಯತಿ.
6. ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ, ಕೋಲಾರ ಜಿಲ್ಲಾ ಪಂಚಾಯತಿ.
7. ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ, ಬೆಂಗಳೂರು(ಗ್ರಾ) ಜಿಲ್ಲಾ ಪಂಚಾಯತಿ.
8. ಕಾರ್ಯನಿರ್ವಾಹಕ ಅಧಿಕಾರಿ, ಹುಣಸೂರು ತಾಲ್ಲೂಕು ಪಂಚಾಯತಿ, ಮೈಸೂರು ಜಿಲ್ಲಾ ಪಂಚಾಯತಿ.
9. ಪಂಚಾಯತಿ ಅಭಿವೃದ್ಧಿ ಅಧಿಕಾರಿ, ರಾಜಾನುಕುಂಟೆ ಗ್ರಾ.ಪಂ., ಬೆಂಗಳೂರು ಉತ್ತರ ತಾಲ್ಲೂಕು.
10. ಪಂಚಾಯತಿ ಅಭಿವೃದ್ಧಿ ಅಧಿಕಾರಿ, ಸೋಮನಹಳ್ಳಿ ಗ್ರಾ.ಪಂ., ಬೆಂಗಳೂರು ದಕ್ಷಿಣ ತಾಲ್ಲೂಕು.
11. ಸಹಾಯಕ ನಿರ್ದೇಶಕರು, ಇ-ಆಡಳಿತ, ಗ್ರಾಅಪ ಇಲಾಖೆ, ಬೆಂಗಳೂರು.
12. ಶ್ರೀ ಲಕ್ಷ್ಮೀಶ, Technical Director, ಎನ್.ಐ.ಸಿ, ಬೆಂಗಳೂರು.
13. ರಾಜ್ಯ ಯೋಜನಾ ವ್ಯವಸ್ಥಾಪಕರು, ಇ-ಪಂಚಾಯತ್, ಗ್ರಾಅಪ ಇಲಾಖೆ, ಬೆಂಗಳೂರು.